ಮಾಡಿರುವ ರವಿಕಿರಣ್ ಇಂದು ಜಾಗತಿಕ ಸಂಗೀತಲೋಕದಲ್ಲಿ ಸುಪರಿಚಿತ.

'ಪ್ರಶಸ್ತಿ ಬಂದಿರುವುದು ತುಂಬ ಸಂತಸವಾಗಿದೆ. ಇದಕ್ಕೆ ಕಾರಣ ನನ್ನ ತಂದೆ ಎನ್.ನರಸಿಂಹನ್ ಹಾಗೂ ಗುರು ಟಿ. ಬೃಂದಾ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ. ಇಂಥ ಪ್ರತಿಷ್ಠಿತ ಪ್ರಶಸ್ತಿ ಬಂದಿರುವುದರಿಂದ ನಾನು ಇನ್ನೂ ಸಂಗೀತದಲ್ಲಿ ಹೆಚ್ಚಿನ ಸಾಧನೆ, ಪರಿಶ್ರಮ ತೋರಿಸಬೇಕು, ಹೆಚ್ಚು ದುಡಿಯಬೇಕು ಎಂಬುದನ್ನು ಸಾಬೀತುಪಡಿಸಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ರವಿಕಿರಣ್.

ರವಿಕಿರಣ್ ಕರ್ನಾಟಕ ಸಂಗೀತದ ನೂರಾರು ಕೀರ್ತನೆಗಳನ್ನು ಜನಪ್ರಿಯಗೊಳಿಸಿದವರು. ಓತ್ತುಕಾಡು ವೆಂಕಟಸುಬ್ಬಯ್ಯಾರ್ ಅವರಿಂದ ಹಲವಾರು ಕೀರ್ತನೆಗಳನ್ನು ಕಲಿತುಕೊಂಡರು. ನೀದಮಂಗಲಂ ಕೃಷ್ಣಮೂರ್ತಿ ಭಾಗವತರ್ ಅವರಿಂದಲೂ ಸಂಗೀತದ ಉನ್ನತ ಅಭ್ಯಾಸ ಮಾಡಿದವರು. ಇವೆಲ್ಲವನ್ನೂ ಕರ್ನಾಟಕ ಸಂಗೀತದಲ್ಲಿ ಸದಾ ಪ್ರಚಲಿತದಲ್ಲಿರುವಂತೆ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿದ ವಿದ್ವಾನ್ ರವಿಕಿರಣ್ ಸುಮಾರು 800 ಕೃತಿಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಗಾಯನ, ಚಿತ್ರವೀಣೆ ನುಡಿಸಾಣಿಕೆ, ರಾಗ ಸಂಯೋಜಕ, ಸಂಗೀತ ಗುರು, ಕೃತಿ ಕರ್ತೃ ಮುಂತಾದ ಸಂಗೀತದ ಹತ್ತು ಹಲವು ವಿಶೇಷಣಗಳನ್ನು ಮಡಿಲಲ್ಲಿಟ್ಟುಕೊಂಡು ಪರಂಪರೆಯ ಸಂಗೀತವನ್ನು ಮುಂದುವರೆಸುತ್ತಿರುವ ರವಿಕಿರಣ್ ಅವರ ತಾತ ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ ಮಧುರ ವಾದನಕ್ಕೆ ಹೆಸರಾಗಿದ್ದರು.

ರವಿಕಿರಣ್ ಹುಟ್ಟಿದ್ದು ಮೈಸೂರಿನಲ್ಲಿ 1967ರಲ್ಲಿ. ಚಿತ್ರವೀಣಾ ವಾದನದಲ್ಲಿ ವಿಶ್ವಮಾನ್ಯತೆ ಪಡೆದಿರುವ ರವಿಕಿರಣ್, ಅಮೆರಿಕದಲ್ಲಿ 'ಭಾರತೀಯ ಸಂಗೀತದ ಮೊಜಾರ್ಟ್' ಎಂಬ ಪ್ರಶಂಸೆ ಗಳಿಸಿರುವ ಅಪರೂಪದ ಹಾಗೂ ಪ್ರತಿಭಾವಂತ ಕಲಾವಿದ ಎಂಬ ಹೆಗ್ಗಳಿಕೆ ಗಳಿಸಿದ್ದಾರೆ.

ಎಳೆಯ ವಯಸ್ಸಿನಿಂದಲೇ ನೂರಾರು ರಾಗಗಳನ್ನು ಗುರುತಿಸಿ ಶೆಮ್ಮಂಗುಡಿ, ಎಂ.ಎಸ್. ಸುಬ್ಬುಲಕ್ಷ್ಮಿ, ಪಂಡಿತ್ ರವಿಶಂಕರ್, ಟಿ.ಆರ್. ಮಹಾಲಿಂಗಂ ಮೊದಲಾದ ಸಂಗೀತ ದಿಗ್ಗಜಗಳ ಮೆಚ್ಚುಗೆ ಗಳಿಸಿದ ರವಿಕಿರಣ್ ಇಂದು ಸಂಗೀತ ಸಾಮ್ರಾಟ್ ಆಗಿ ಬೆಳೆದಿರುವ ಪರಿಯೇ ಈ ಕಾಲದ ವಿಸ್ಮಯ ಎಂದೇ ಹೇಳಬಹುದು.

ತಮ್ಮ ತಂದೆ ಚಿತ್ರವೀಣಾ ನರಸಿಂಹನ್ ಅವರ ಬಳಿ ಗಾಯನ ಕಲೆಯನ್ನು ಕಲಿತಿರುವ ಐದು ವರ್ಷದ ಪುಟಾಣಿ ಇರುವಾಗಲೇ ಕೊಯಮತ್ತೂರಿನಲ್ಲಿ ರೆಕಾರ್ಡ್ ಸೆಟ್ಟಿಂಗ್ ಒಂದರಲ್ಲಿ ಕಛೇರಿ ನೀಡಿದ್ದರು. ಅದಾಗಿ 10 ವರ್ಷದ ಬಾಲಕ ಮದ್ರಾಸ್, ಮೈಸೂರು, ಬೆಂಗಳೂರು ಗಳಲ್ಲಿ ಕಛೇರಿ ನೀಡಲಾರಂಭಿಸಿದರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಅತ್ಯಂತ ಸಣ್ಣ ವಯಸ್ಸಿನಲ್ಲೇ ಸ್ಕಾಲರ್‌ಶಿಪ್ ಪಡೆದ ಕಲಾವಿದ ಎಂಬುದೂ ರವಿಕಿರಣ್ ಅವರ ಹೆಗ್ಗಳಿಕೆಯೇ. 1999ರಲ್ಲಿ ಪರಿಪೂರ್ಣ ಗಾಯಕನೆಂದು ಖ್ಯಾತಿ ಪಡೆದು ಅದೇ ವರ್ಷ ಚಿಕಾಗೊ ವಿಶ್ವ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದವರು.

ತಮ್ಮ ಹತ್ತನೇ ವಯಸ್ಸಿಗೆ ಚಿತ್ರವೀಣೆಯತ್ತ ಒಲವು ಬೆಳೆಸಿಕೊಂಡು 21 ತಂತಿಗಳ ಚಿತ್ರವೀಣೆ ಕಲಿಯಲಾರಂಭಿಸಿ 11ನೇ ವಯಸ್ಸಿಗೇ ಈ ವೀಣೆಯಲ್ಲಿ ಕಛೇರಿಯನ್ನೂ ಕೊಡಲಾರಂಭಿಸಿದರು. ಮುಂದೆ ಮೂರು ವರ್ಷಗಳಲ್ಲಿ ದೇಶದ ತಂತಿ ವಾದ್ಯಗಾರರಲ್ಲಿ ಮುಂಚೂಣಿ ಸಾಲಿನಲ್ಲಿ ನಿಲ್ಲುವ ಕಲಾವಿದರಾಗಿ ರೂಪುಗೊಂಡರು. ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಚಿತ್ರವೀಣೆಯ ನಾದವನ್ನು ಹರಿಸಲಾರಂಭಿಸಿದರು. 1985ರಲ್ಲಿ ಚೆನ್ನೈಯಲ್ಲಿ ಒಂದು ದಿನವಿಡೀ (24 ಗಂಟೆಗಳ) ಸಂಗೀತ ಕಛೇರಿ ನೀಡಿ ವಿಶ್ವದಾಖಲೆ ನಿರ್ಮಿಸಿದರು. 1985ರಲ್ಲಿ ಫ್ರಾನ್ಸ್, 87ರಲ್ಲಿ ಸ್ವಿರ್ಜಲೆಂಡ್, 92ರಲ್ಲಿ ಜರ್ಮನಿ, 2012ರಲ್ಲಿ ಬ್ರೆಜಿಲ್, 97ರಲ್ಲಿ ಆಸ್ಟ್ರಿಯಾ ಮತ್ತು ಯುಗೊಸ್ಲೇವಿಯಾ ದೇಶಗಳಲ್ಲಿ ನಡೆದ ಸಂಗೀತ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇಂಥ ದಾಖಲೆ ಸಂಗೀತದ ಇತಿಹಾಸದಲ್ಲೇ ಬಹಳ ಅಪರೂಪದ್ದು.

## ಪಂಚ ಭಾಷೆಗಳಲ್ಲಿ ರಾಗ ಸಂಯೋಜನೆ

ರವಿಕಿರಣ್ ಕರ್ನಾಟಕ ಸಂಗೀತದ ಸುಮಾರು 800 ವೈವಿಧ್ಯಮಯ ಕೃತಿಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಕರ್ನಾಟಕ ಸಂಗೀತದ 35 ತಾಳಗಳಲ್ಲೂ ಕೃತಿ ರಚಿಸಿರುವ ಏಕೈಕ ವಾಗ್ಗೇಯಕಾರ ಎಂದು ಪ್ರಸಿದ್ಧಿ ಪಡೆದಿದ್ದಾರೆ. ಸಂಗೀತವನ್ನು ಕುರಿತು ಹಲವು ಗ್ರಂಥಗಳನ್ನು ಬರೆದಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ವರ್ಣ, ಕೃತಿ, ಜಾವಳಿ, ತಿಲ್ಲಾನ ಹಾಗೂ ಪದಂಗಳಿಗೂ ಸಂಗೀತದ ಮಟ್ಟುಗಳನ್ನು ಅಳವಡಿಸಿದ್ದಾರೆ. ಅತ್ಯಂತ ಎಳೆಯ ವಯಸ್ಸಿನಲ್ಲೇ 'ಚೂಡಾಮಣಿ' ಎಂಬ ರಾಗ ರಚಿಸಿದ್ದಾರೆ. ಅಲ್ಲದೆ ಕೇಶವಪ್ರಿಯ, ಸ್ನೇಹಪ್ರಿಯ, ಅಂಧಕಾರಿಣಿ, ಮೋಹಿನಿ ರಾಗಗಳನ್ನು ಸೃಷ್ಟಿಸಿದ್ದಾರೆ. ಸಂಸ್ಕೃತ, ತಮಿಳು, ತೆಲುಗು ಕನ್ನಡ ಹಾಗೂ ಹಿಂದಿ.. ಹೀಗೆ ಪಂಚಭಾಷೆಗಳಲ್ಲಿ ರಾಗ ಸಂಯೋಜನೆ ಮಾಡಿದ ಅಪರೂಪದ ಕಲಾವಿದರಿವರು.

ಸಂಗೀತ ದಿಗ್ಗಜರಾದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಟಿ. ಬೃಂದಾ, ಗಿರಿಜಾ ದೇವಿ, ಪಂ. ಬಿರ್ಜು ಮಹಾರಾಜ್, ಡಾ.ಎಂ. ಬಾಲಮುರಳಿಕೃಷ್ಣ, ವಿಶ್ವಮೋಹನ ಭಟ್, ಡಾ.ಎನ್.ರಮಣಿ, ಆರ್.ಕೆ. ಶ್ರೀಕಂಠನ್, ಪಂ. ಕಿಶನ್ ಮಹಾರಾಜ್, ನೇದನೂರಿ ಕೃಷ್ಣಮೂರ್ತಿ, ಮ್ಯಾಂಡೊಲಿನ್ ಶ್ರೀನಿವಾಸ್ ಮೊದಲಾದ ಖ್ಯಾತ ಸಂಗೀತಗಾರರ ಜತೆಗೆ ಸಂಗೀತ ಕಛೇರಿ ನೀಡಿದ ಅನುಭವ ಇವರಿಗಿದೆ.

ಪಾಶ್ಚಾತ್ಯ ಸಂಗೀತದಲ್ಲಿಯೂ ಅಪಾರ ಆಸಕ್ತಿ ತಳೆದಿರುವ ರವಿಕಿರಣ್, ವೆಸ್ಟರ್ನ್ ಕ್ಲಾಸಿಕಲ್ ಸಿಂಫೋನಿ ಆರ್ಕೆಸ್ಟ್ರಾ, ಚೇಂಬರ್ ಆರ್ಕೆಸ್ಟ್ರಾ ಮುಂತಾದ ತಂಡಗಳಲ್ಲಿ ಕೆಲಸ ಮಾಡಿದ್ದಾರೆ. ವಿದೇಶಗಳಲ್ಲಿ ಅನೇಕ ಶಾಲಾ ಕಾಲೇಜುಗಳಲ್ಲಿಯೂ ಸಂಗೀತವನ್ನು ಪ್ರಸ್ತುತಪಡಿಸಿದ್ದಾರೆ. 2006ರಿಂದ ಭಾರತದ ಹಳ್ಳಿ ಹಳ್ಳಿಗಳಲ್ಲಿ ಸಂಗೀತ ಶಿಬಿರ ನಡೆಸುತ್ತಿದ್ದಾರೆ. ತಮಿಳುನಾಡಿನಲ್ಲಿ ಸಾವಿರಾರು ಮಕ್ಕಳಿಗೆ ಸಂಗೀತ ಕಲಿಸಿ ಮಕ್ಕಳಲ್ಲಿ ಕಲೆಯ ಅಭಿರುಚಿ ಹುಟ್ಟಿಸಿದ್ದೇ ಅಲ್ಲದೆ ಮಕ್ಕಳಲ್ಲಿ ಸದ್ಭಾವನೆ ಮೂಡಿಸುವಂತ ಮಹತ್ತರ ಕೆಲಸ ಮಾಡುತ್ತಿದ್ದಾರೆ.



ವಿದ್ವಾನ್ ರವಿಕಿರಣ್ ಕಛೇರಿ. ಘಟಂ ಗಿರಿಧರ ಉಡುಪ ಹಾಗೂ ಜಗನ್ನಾಥ ಅವರೊಂದಿಗೆ

## ವಿಶ್ವಮಾನ್ಯತೆ ಗಳಿಸಲಿ..

'ಸಂಗೀತ ಕಲಾನಿಧಿ' ಶಾಸ್ತ್ರೀಯ ಸಂಗೀತದಲ್ಲಿ ಅತ್ಯುನ್ನತ ಸಾಧನೆ ತೋರಿದ ಕಲಾವಿದರಿಗೆ ನೀಡುವ ಪ್ರತಿಷ್ಠಿತ ಪ್ರಶಸ್ತಿ. ಮದ್ರಾಸ್ ಸಂಗೀತ ಅಕಾಡೆಮಿ 2017ರ ಡಿಸೆಂಬರ್ 17ರಿಂದ 2018ರ ಜನವರಿ 1ರವರೆಗೆ ಚೆನ್ನೈಯಲ್ಲಿ ನಡೆಸುವ ವಾರ್ಷಿಕ ಸಮ್ಮೇಳನದ ಅಧ್ಯಕ್ಷತೆಯನ್ನೂ ರವಿಕಿರಣ್ ವಹಿಸಿಕೊಳ್ಳಲಿದ್ದಾರೆ. 2018ರ ಜನವರಿ 1ರಂದು ನಡೆಯುವ ಸಮಾರಂಭದಲ್ಲಿ ರವಿಕಿರಣ್ ಅವರಿಗೆ 'ಸಂಗೀತ ಕಲಾನಿಧಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇವರ ಸಂಗೀತ ಸಾಧನೆ ಇನ್ನಷ್ಟು ಮೇಲೇರಿ ವಿಶ್ವಮಾನ್ಯತೆ ಗಳಿಸಲಿ ಎಂಬುದೇ ಎಲ್ಲ ಸಂಗೀತಪ್ರಿಯರ ಹಾರೈಕೆ.